


ಟೊರಾಂಟೊ ಕಾಮನ್‌ವೆಲ್ತ್ ಕುಸ್ತಿ ಪಂದ್ಯಾವಳಿಗೆ ಆಯ್ಕೆಯಾದ ರಫೀಕ್ ರಾಜೇಸಾಬ ಹೊಳಿ ಅವರನ್ನು ಎ.ಪಿ. ಪಾಟೀಲ ಗುರೂಜಿ ಮಂಗಳವಾರ ಸನ್ಮಾನಿಸಿದರು.

# ಸಿಂಗನಹಳ್ಳಿ ಹೊಳಿಗೆ ಹಾರೈಕೆ

## ■ ಕಾಮನ್‌ವೆಲ್ತ್ ಕುಸ್ತಿಗೆ ರಫೀಕ್ ಆಯ್ಕೆ

**ಧಾರವಾಡ:** ಟೊರಾಂಟೊ ಕಾಮನ್‌ವೆಲ್ತ್ ಕುಸ್ತಿ ಪಂದ್ಯಾವಳಿಗೆ ಆಯ್ಕೆಯಾದ ತಾಲೂಕಿನ ಸಿಂಗನಹಳ್ಳಿಯ ರಫೀಕ್ ರಾಜೇಸಾಬ ಹೊಳಿ ಅವರನ್ನು ಅಭಿನಂದಿಸಿ, ಪದಕ ಗೆದ್ದು ದೇಶಕ್ಕೆ ಕೀರ್ತಿ ತರುವಂತೆ ಹಾರೈಸುವ ಮೂಲಕ ನಗರ, ಗ್ರಾಮಾಂತರದ ಜನ ಕ್ರೀಡಾಪ್ರೇಮವನ್ನು ಮೆರೆದರು.

ನಗರದ ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಹಾಗೂ ಜಿಲ್ಲಾಡಳಿತ ಆಶ್ರಯದಲ್ಲಿ ಮಂಗಳವಾರ ಆಯೋಜಿಸಿದ್ದ ಅಭಿನಂದನಾ ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಚಿಕ್ಕಮಲ್ಲಿವಾಡ ಆಶ್ರಮದ ಎ.ಪಿ. ಪಾಟೀಲ ಗುರೂಜಿ ಮಾತನಾಡಿ, ಸಾಧನೆಗೆ ಮಾನಸಿಕವಾಗಿ ಸಿದ್ಧವಾಗಬೇಕು. ಯಾವುದೇ ಕಾರ್ಯ ಮಾಡುವ ಮೊದಲು ಗುರಿ, ಉದ್ದೇಶಗಳನ್ನು ಹೊಂದಿರಬೇಕು. ಒಬ್ಬ ಕ್ರೀಡಾಪಟುವಿಗೆ ಸಾಧನೆ ಮಾಡಲು ಅರಿವಿನ ಜೀವನ ಮುಖ್ಯ ಎಂದರು.

ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಮಾತನಾಡಿ, ರಾಜ್ಯದಲ್ಲಿಯ ಗರಡಿ ಮನೆಗಳನ್ನು ಸಂರಕ್ಷಿಸಿ ಅಭಿವೃದ್ಧಿಪಡಿಸಬೇಕಿದೆ. ಗ್ರಾಮೀಣ ಕ್ರೀಡೆಗಳ ಬಗ್ಗೆ ಸರ್ಕಾರ ಸರಿಯಾದ ಗಮನ ನೀಡುತ್ತಿಲ್ಲ ಎಂದು ದೂರಿದರು.

ಶಾಸಕ ವಿನಯ ಕುಲಕರ್ಣಿ ಮಾತನಾಡಿದರು. ಕ್ರೀಡಾಪಟು ರಫೀಕ್ ರಾಜೇಸಾಬ ಹೊಳಿ ಹಾಗೂ ಅವರ ತಂದೆ ರಾಜೇಸಾಬ, ತಾಯಿ ಫಾತಿಮಾ ಅವರನ್ನು ಸನ್ಮಾನಿಸಲಾಯಿತು. ಶಾಸಕ ಅರವಿಂದ ಬೆಲ್ಲದ, ಕರವೇ ಬಾಗಲಕೋಟೆ ಜಿಲ್ಲಾಧ್ಯಕ್ಷ ರಮೇಶ ಬದ್ನೂರ, ವಕೀಲರ ಸಂಘದ ಅಧ್ಯಕ್ಷ ವಿ.ಡಿ. ಕಾಮರಡ್ಡಿ, ವಕೀಲ ಪಿ.ಎಚ್. ನೀರಲಕೇರಿ, ಕುಸ್ತಿ ತರಬೇತುದಾರ ಆರ್. ಶಿವಾನಂದ, ಜಿಲ್ಲಾ ಕ್ರೀಡಾ ಇಲಾಖೆ ಅಧಿಕಾರಿ ಶ್ರೀನಿವಾಸ, ಪಾಲಿಕೆ ಸದಸ್ಯ ಶಿವು ಹಿರೇಮಠ, ಸಾಹಿತಿ ಮೋಹನ ನಾಗಮ್ಮನವರ, ಕರವೇ ಕಾರ್ಯಕರ್ತೆ ಹೇಮಲತಾ, ಇತರರು ಇದ್ದರು. ಜಿನೇಂದ್ರ ಕುಂದಗೋಳ ಸ್ವಾಗತಿಸಿದರು.

> ಕಾಮನ್‌ವೆಲ್ತ್ ಕ್ರೀಡೆಗೆ ಆಯ್ಕೆಯಾದ ರಫೀಕ್ ಹೊಳಿ ಕುಸ್ತಿ ಸ್ಪರ್ಧೆಯಲ್ಲಿ ಚಿನ್ನದ ಪದಕ ಗೆದ್ದರೆ ಸರ್ಕಾರದಿಂದ 25 ಲಕ್ಷ ರೂಪಾಯಿ ಕೊಡಿಸುತ್ತೇನೆ.
>
> । ವಿನಯ ಕುಲಕರ್ಣಿ, ಶಾಸಕ

> ನನ್ನ ಗುರಿ ದೊಡ್ಡದಿದೆ. ಅದಕ್ಕೆ ತಕ್ಕ ಪ್ರಯತ್ನ ನಡೆಸಿದ್ದೇನೆ. ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆಲ್ಲುವ ವಿಶ್ವಾಸವಿದೆ. ಮುಂದಿನ ಒಲಿಂಪಿಕ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಲು ತಯಾರಿ ನಡೆಸುತ್ತಿದ್ದೇನೆ.
>
> । ರಫೀಕ್ ಹೊಳಿ, ಅಂತಾರಾಷ್ಟ್ರೀಯ ಕ್ರೀಡಾಪಟು

V.V. 6/5/15